[Govt. of Karnataka C.R.P. 67]

| Deposition Sheets<br>(RP.No.57)<br>Form No.4 (Civil) |
|---|

**IN THE COURT OF CIVIL JUDGE & J.M.F.C., KARKALA.**

**Criminal Case No. 161/2024**

**....................................................Vs....................................**

ಪಿ.ಡಬ್ಲ್ಯು ಃ 6 ಸಿ.ಡಬ್ಲ್ಯು ಃ 9

ಸಾಕ್ಷಿದಾರನ ಹೆಸರು ಃ ಡಾ. ಗಿರೀಶ್ ಕೆ ಎಸ್

ತಂದೆಯ ಹೆಸರು ಃ ಕೆ ಶ್ರೀನಿವಾಸ ಹಂದೆ

ಪ್ರಾಯ ಃ 42 ವರ್ಷ

ಉದ್ಯೋಗ ಃ ಸಹಾಯಕ ನಿರ್ದೇಶಕರು ಆರ್.ಎಫ್.ಎಸ್.ಎಲ್ ಮಂಗಳೂರು

ವಾಸ ಃ ಮಂಗಳೂರು

ದಿಃ **23-01-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

( ಸಾಕ್ಷಿಯು ವಿಸಿ ಮುಖಾಂತರ ಹಾಜರಾಗಿದ್ದು, ಪ್ರೇಮ ಬೆರಳಚ್ಚುಗಾರ್ತಿರವರನ್ನು ಸಂಯೋಜಕರಾಗಿ ನೇಮಕ ಮಾಡಿ ನಂತರ ಅವರ ಸಾಕ್ಷಿಯನ್ನುಪಡೆಯಲಾಯಿತು)

ನಾನು **2021** ರಿಂದ ಹಿರಿಯ ವೈಜ್ಞಾನಿಕ ತಜ್ಞರಾಗಿ ಮಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ **07-08-2023** ರಂದು ಚಾಸಾ**-10** ರವರ ಮುಖೇನ ಮುಖೇನ ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡ ಸ್ವತ್ತುಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ದಾಖಾಲಾತಿಗಳನ್ನು ಸ್ವೀಕರಿಸಿರುತ್ತೇನೆ. ಅದನ್ನು ದಿಃ **18-08-2023** ರಿಂದ ಪರೀಕ್ಷೆಗೆ ಒಳಪಡಿಸಲಾಯಿತು. ಬಟ್ಟೆಯ ಪ್ಯಾಕೆಟ್ ಗಳಲ್ಲಿ ಎಸ್ ಹೆಚ್ ಓ ಅರಗು ಸೀಲು ಇದ್ದು ಅವುಗಳು ಸುಸ್ಥಿತಿಯಲ್ಲಿದ್ದು

ಅದು ತನಿಖಾಧಿಗಳು ಕಳುಹಿಸಿದ ಮಾದರಿ ಸೀಲ್ ನೊಂದಿಗೆ ತಾಳೆಯಾಗುತ್ತಿತ್ತು. ಪ್ರತಿಯೊಂದು ಬಟ್ಟೆ ಚೀಲಗಳನ್ನು ಬಿಚ್ಚಿ ನೋಡಲಾಗಿ ಅವುಗಳಲ್ಲಿ **1** ಜಿಪ್ಲೋಕ್ ಪ್ಲಾಸ್ಟಿಕ್ ಕವರ್ ಗಳು ಇದ್ದು, ಅವುಗಳಲ್ಲಿ ಗಿಡದ ಒಣಗಿದ ಭಾಗಗಳಾದ ಕಾಂಡ, ಎಲೆ, ಮೊಗ್ಗು, ಹೂವು ಹಾಗೂ ಬೀಜಗಳಿಂದ ಕೂಡಿದ್ದು, ನಿರ್ದಿಷ್ಟ ವಾಸನೆಯನ್ನು ಹೊಂದಿದ್ದವು. ಅವುಗಳನ್ನು ತೂಕ ಮಾಡಲಾಗಿ ಅವುಗಳನ್ನು ತನಿಖಾಧಿಕಾರಿಗಳು ಆರ್ಟಿಕಲ್ ನಂಬ್ರ **5** ರಿಂದ **8** ಎಂದು ಗುರುತಿಸಿದ್ದು, ಆರ್ಟಿಕಲ್ ನಂಬ್ರ **5** ರಲ್ಲಿ **11.89** ಗ್ರಾಂ, ಆರ್ಟಿಕಲ್ ನಂಬ್ರ **6** ರಲ್ಲಿ **12.16**, ಆರ್ಟಿಕಲ್ ನಂಬ್ರ **7** ರಲ್ಲಿ **12.20**, ಆರ್ಟಿಕಲ್ ನಂಬ್ರ **8** ರಲ್ಲಿ **21.18** ಗ್ರಾಂ ತೂಕದಷ್ಟು ಮೇಲೆ ಹೇಳಿದ ವಸ್ತುಗಳು ಕಂಡುಬಂದಿರುತ್ತದೆ.

ಅವುಗಳನ್ನು ವಿವಿಧ ರೀತಿಯ ರಾಸಾಯನಿಕ ಪರೀಕ್ಷಗೆ ಒಳಪಡಿಸಿದಾಗ ಅವುಗಳಲ್ಲಿ ಗಾಂಜ ಅಂಶ ಪತ್ತೆಯಾಗಿದ್ದು, ಗಾಂಜ ಎಂದು ಕಂಡುಬಂದಿರುತ್ತದೆ. ಸದ್ರಿ ವಸ್ತು ಮನೋವಿಧ್ರಾವಕ ವಸ್ತು ಆಗಿರುತ್ತದೆ. ಪರೀಕ್ಷೆಯ ನಂತರ ಉಳಿದ ವಸ್ತುವನ್ನು ತೂಕ ಮಾಡಲಾಗಿ, ಆರ್ಟಿಕಲ್ ನಂಬ್ರ **5** ರಲ್ಲಿ **7.16** ಗ್ರಾಂ, ಆರ್ಟಿಕಲ್ ನಂಬ್ರ **6** ರಲ್ಲಿ **7.17** ಗ್ರಾಂ, ಆರ್ಟಿಕಲ್ ನಂಬ್ರ **7** ರಲ್ಲಿ **6.76** ಗ್ರಾಂ, ಆರ್ಟಿಕಲ್ ನಂಬ್ರ **8** ರಲ್ಲಿ **24.48** ಗ್ರಾಂ ವಸ್ತು ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ ದಿಃ **23-08-2023** ರಂದು ವರದಿ ನೀಡಿರುತ್ತೇನೆ. ಪರೀಶಿಲಿಸಿದ ಸ್ವತ್ತುಗಳನ್ನು ಅದೇ ಬಟ್ಟೆ ಚೀಲಗಳಲ್ಲಿ ಪ್ಯಾಕ್ ಮಾಡಿ ನಮ್ಮ ಕಚೇರಿಯ ಮೋಹರಿನಿಂದ ಅರಗು ಸೀಲ್ ನಿಂದ ಮೊಹರು ಮಾಡಿ ನಮ್ಮ ಕಚೇರಿಯ ಮಾದರಿ ಮೊಹರ್ ನೊಂದಿಗೆ ತನಿಖಾಧಿಕಾರಿಯವರಿಗೆ ಹಿಂತಿರುಗಿಸಿರುತ್ತೇನೆ.

ಸಾಕ್ಷಿಯು ತಾನು ನೀಡಿದ ವರದಿ, ಮಾದರಿ ಸೀಲು ನಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**15** ಮತ್ತು **16** ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-**15**(ಎ) ಹಾಗೂ **16**(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ **1** ಮತ್ತು **2** ನೇ ಆರೋಪಿತರ ಪರಃ ಶ್ರೀಮತಿ ಕೆ ಎಸ್ ವಕೀಲರಿಂದಃ</u>

ದಿಃ 07-08-2023 ರಂದು ಚಾಸಾ-10 ರವರಿಂದ ಮನವಿ ಸ್ವೀಕರಿಸಿರುತ್ತೇನೆ. ಸೊತ್ತುಗಳನ್ನು ಸ್ವೀಕರಿಸಿದ ಎಷ್ಟು ದಿನಗಳ ಒಳಗೆ ಪರೀಕ್ಷೆಗೆ ಒಳಪಡಿಸಬೇಕು ಎಂದರೆ ಸಾಕ್ಷಿ

ನಿಗದಿತ ಸಮಯ ಇರುವುದಿಲ್ಲ. ಆದ್ಯತೆಯ ಆಧಾರದ ಮೇರೆಗೆ ಪರೀಕ್ಷೆಗೆ ಒಳಪಡಿಸುತ್ತೇವೆ. ಪ್ರಥಮವಾಗಿ ಸೊತ್ತುಗಳನ್ನು ದಿಃ 07-08-2023 ರಂದು ನೋಡಿರುತ್ತೇನೆ. ದಿಃ 07-08-2023 ಸೊತ್ತುಗಳನ್ನು ಸ್ವೀಕರಿಸಿ, ದಿಃ 18-08-2023 ರ ನಂತರ ಪರೀಕ್ಷೆಗೆ ಒಳಪಡಸಿದ್ದಕ್ಕೆ ಕಾರಣ ವರದಿಯಲ್ಲಿ ಕಾಣಿಸಿರುತ್ತೀರಾ ಎಂದರೆ ಇಲ್ಲ. ಮುಂದುವರಿದು ಕಾಣಿಸುವ ಕ್ರಮ ಇರುವುದಿಲ್ಲ. ವರದಿಯನ್ನು ನಮ್ಮ ಕಚೇರಿಯಲ್ಲಿರುವ ನಮೂನೆಗೆ ಅನುಸಾರವಾಗಿ ಕಳುಹಿಸುತ್ತೇವೆ. ದಿಃ 07-08-2023 ರಂದು ಚಾಸಾ-10 ರ ಸಮಕ್ಷಮ ಯಾವೆಲ್ಲಾ ಸೊತ್ತುಗಳು ಇವೆ ಎಂದು ಹಾಗೂ ಅವುಗಳ ತೂಕ ಎಷ್ಟು ಎಂದು ನಾನಾಗಲೀ ನಮ್ಮ ಕಚೇರಿಯ ಸಿಬ್ಬಂದಿಯಾಗಲೀ ಮಾಡಿರುವುದಿಲ್ಲ. ಅವುಗಳ ದಾಖಲಾತಿ ಹಾಗೂ ಸೀಲುಗಳನ್ನು ನೋಡಿರುತ್ತೇವೆ. ಪರೀಕ್ಷೆಯ ಮೊದಲು ಹಾಗೂ ನಂತರ ಪ್ರತ್ಯೇಕವಾಗಿ ಸೊತ್ತುಗಳ ತೂಕವನ್ನು ಏಕೆ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿ ಸಾಫ್ಟ್ ವೇರ್ ತೊಂದರೆ ಇದ್ದು ಒಟ್ಟಾಗಿ ಕಾಣಿಸುತ್ತಿದೆ. ' ಜಿ ' ಎಂದು ಕಂಡುಬರುವುದು ಗ್ರಾಂ ನ್ನು ಸೂಚಿಸುತ್ತದೆ. ಕಾಂಡ, ಎಲೆ, ಮೊಗ್ಗು, ಹೂವು ಪ್ರತ್ಯೇಕವಾಗಿ ಎಷ್ಟು ತೂಕ ಇದೆ ಎಂದು ಅಳತೆ ಮಾಡಿರುವುದಿಲ್ಲ. ಪರೀಕ್ಷೆಗೆ ಆರ್ಟಿಕಲ್ ನಂಬರ್ 5 ರಲ್ಲಿ 4.73 ಗ್ರಾಂ, ಆರ್ಟಿಕಲ್ ನಂಬರ್ 6 ರಲ್ಲಿ 4.99 ಗ್ರಾಂ, ಆರ್ಟಿಕಲ್ ನಂಬರ್ 7 ರಲ್ಲಿ 5.44 ಗ್ರಾಂ, ಆರ್ಟಿಕಲ್ ನಂಬರ್ 8 ರಲ್ಲಿ 4.70 ಗ್ರಾಂ ಸೊತ್ತುಗಳನ್ನು ಪರೀಕ್ಷೆಗೆ ಉಪಯೋಗಿಸಿರುತ್ತೇನೆ. ಇದನ್ನು ನಿಪಿ-15 ರಲ್ಲಿ ಪ್ರತ್ಯೇಕವಾಗಿ ಕಾಣಿಸಿರುವುದಿಲ್ಲ. ಯಾವ ಸೊತ್ತಲ್ಲಿ ಎಷ್ಟು ಗ್ರಾಂ ಗಾಂಜ ಇತ್ತು ಎಂದು ನಿರ್ದಿಷ್ಟವಾಗಿ ನನ್ನ ಅಭಿಪ್ರಾಯದಲ್ಲಿ ಕಾಣಿಸಿರುವುದಿಲ್ಲ. ನಾನು ಪರೀಕ್ಷಿಸಿದ್ದೇನೆ ಎಂದು ಹೇಳುವ ಸೊತ್ತುಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಪರೀಕ್ಷೆ ಮಾಡದೇ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರಿಯಾದ ನಿಯಮವನ್ನು ಅನುಸರಿಸದೆ ಸ್ವತ್ತುಗಳನ್ನು ಪರೀಕ್ಷಿಸಿ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **3** ಮತ್ತು **4** ನೇ ಆರೋಪಿತರ ಪರಃ ಶ್ರೀ ಬಿ.ಎಮ್.ಎಸ್ ಹಾಗೂ ಶ್ರೀ ಹೆಚ್ ಆರ್ ಕೆ. ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ